**ಪಾಠ–7** **ನವೆಂಬರ್ 6–12**

# ಕಟ್ಟಳೆ ಮತ್ತು ಕೃಪೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಯೆಹೆಜ್ಕೇಲನು 28:15,16; ಧರ್ಮೋಪದೇಶಕಾಂಡ 4:44, ರೋಮ 3:20, ಧರ್ಮೋಪದೇಶಕಾಂಡ 10:1–5, ಧರ್ಮೋಪದೇಶಕಾಂಡ 5:6–22, ಧರ್ಮೋಪದೇಶಕಾಂಡ 9:1–6.

**ಸ್ಮರಣವಾಕ್ಯ : "ನಾನು ದೇವರ ಕೃಪೆಯನ್ನು ನಿರರ್ಥಕ ಮಾಡುವುದಿಲ್ಲ. ಕರ್ಮಮಾರ್ಗದಿಂದ ನೀತಿಯುಂಟಾಗುವುದಾದರೆ ಕ್ರಿಸ್ತನು ಮರಣವನ್ನು ಹೊಂದಿದ್ದಕ್ಕೆ ಕಾರಣವೇ ಇಲ್ಲ"** (ಗಲಾತ್ಯದವರಿಗೆ 2:21).

ಕ್ರೈಸ್ತರ ಅನೇಕ ಪಂಗಡದವರು ಕಟ್ಟಳೆ ಮತ್ತು ಕೃಪೆ ಬಗ್ಗೆ ಮಾತನಾಡುತ್ತಾರೆ ಮತ್ತು ಇವೆರಡರ ನಡುವೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುತ್ತಾರೆ. ಕಟ್ಟಳೆಯು ದೇವರ ಪರಿಶುದ್ಧತೆಯ ಮತ್ತು ನ್ಯಾಯಬದ್ಧದ ಪ್ರಮಾಣ ಆ ಕಟ್ಟಳೆಯನ್ನು ಉಲ್ಲಂಘಿಸುವುದು ಪಾಪ. ಪಾಪ ಮಾಡುವ ಪ್ರತಿಯೊಬ್ಬನು ಅಧರ್ಮವನ್ನು ಮಾಡುವವನಾಗಿದ್ದಾನೆ. ಪಾಪವು ಅಧರ್ಮವೇ (1 ಯೋಹಾನನು 3:4).

ಆದರೆ ನಾವೆಲ್ಲರು ಕಟ್ಟಳೆಗಳನ್ನು ಉಲ್ಲಂಘಿಸಿದ್ದೇವೆ– "ಶಾಸ್ತ್ರವು ಸಮಸ್ತವನ್ನು ಪಾಪಕ್ಕೊಳಗಾಗಿದೆಯೆಂದು ತೀರ್ಮಾನಿಸಿದರು" (ಗಲಾತ್ಯ 3:22). ದೇವರ ಕೃಪೆಯೇ ನಮ್ಮನ್ನು ರಕ್ಷಿಸಲು ಸಾಧ್ಯ. ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. ಅದು ದೇವರ

* **ನವೆಂಬರ್ 13ನೇ ಸಬ್ಬತ್ತಿಗೆ ಈ ಪಾಠವನ್ನು ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ವರವೇ (ಎಫೆಸದವರಿಗೆ 2:8) (ಏಳನೇ ದಿನವು ಸಬ್ಬತ್ ಆಜ್ಞೆಯ ಒಂದು ಭಾಗ ಎಂದು ಖಂಡಿತವಾಗಿಯೂ ತಿಳಿಸಿದೆ. ಯಾಕೆಂದರೆ ಅಲ್ಲಿ ಸಣ್ಣ ಸವಿಸ್ತಾರವಾದ ವಿವರಗಳಿವೆ". ಆದರೂ ಅನೇಕ ಕ್ರೈಸ್ತರು ವಿಧವಾದ ಕಾರಣಗಳಿಂದ ಏಳನೇ ದಿನದ ಸಬ್ಬತ್ತನ್ನು ನಿರಾಕರಿಸಲು ತೀರ್ಮಾನಿಸಿದ್ದಾರೆ. ಅವರ ನಿರಾಕರಣೆಗೆ ಎಲ್ಲಾ ತರಹದ ಬಲಹೀನವಾದ ನೆಪಗಳಿಂದ ತಮ್ಮನ್ನು ನ್ಯಾಯುವೆಂದು ಸಮರ್ಥಿಸಿಕೊಳ್ಳುತ್ತಾರೆ. ಆದರೆ ಅದೆಲ್ಲ ಮತ್ತೊಂದು ಪ್ರಕರಣ.

ಮತ್ತೊಂದು ಭಿನ್ನವಾದ ರೀತಿಯಲ್ಲಿ ವ್ಯಕ್ತಪಡಿಸಿದಾಗ್ಯೂ ಹಾಗೂ ನಾನಾ ವಿಧವಾದ ದೃಶ್ಯಗಳಲ್ಲಿ ಆಜ್ಞೆ ಮತ್ತು ಕೃಪೆ ಎಂಬ ವಿಷಯವು ಇಡಿ ಸತ್ಯವೇದದಲ್ಲಿ ಕಂಡುಬರುತ್ತದೆ. ಧರ್ಮೋಪದೇಶ ಪುಸ್ತಕದಲ್ಲೂ ಒಳಗೊಂಡಿದೆ. ಹೌದು ಧರ್ಮೋಪದೇಶಕಾಂಡದಲ್ಲೂ ಆಜ್ಞೆ ಮತ್ತು ಕೃಪೆಯ ಸಂಬಂಧವನ್ನು ಕಾಣುತ್ತೇವೆ. ಆದರೆ ಅದು ಅದ್ವಿತೀಯ ಸನ್ನಿವೇಶದಲ್ಲಿ.

**ಭಾನುವಾರ** **ನವೆಂಬರ್ 7**

## ಪರಲೋಕದಲ್ಲಿ ಕಟ್ಟಳೆ

ಪರಲೋಕದಲ್ಲಿ ಕಟ್ಟಳೆ, ದೇವರು ಪ್ರೀತಿಯ ದೇವರು ಮತ್ತು ಪ್ರೀತಿಯು ತನ್ನ ನಡತೆಯ ಮೂಲ ತತ್ವವಾಗಿದೆ ಹಾಗೂ ತನ್ನ ಸಕಾರ್ಸ್ರಕ್ಕೆ ಆಧಾರವಾಗಿದೆ. ಮತ್ತೆ ನಾವು ಹಿಂದಿರುಗಿ ದೇವರನ್ನು ಪ್ರೀತಿ ಮಾಡಬೇಕೆಂದು ಕೋರುತ್ತಾನೆ (ಇಚ್ಛಿಸುತ್ತಾನೆ). ನಮ್ಮನ್ನು ನೈತಿಕವಾಗಿ ಸೃಷ್ಟಿ ಮಾಡಿ ಮತ್ತು ನೈತಿಕ ಸ್ವತಂತ್ರವನ್ನು ಕೊಟ್ಟು ಆ ಸ್ವತಂತ್ರವು ಸಹಜವಾದ ಪ್ರೀತಿಯಿಂದ ಒಳಗೊಂಡಿದೆ. ನೈತಿಕ ಸ್ವತಂತ್ರಕ್ಕೆ ಕೇಂದ್ರ ಮನೋಭಾವ ನೈತಿಕ ಆಜ್ಞೆ ಆಗಿದೆ. ಸಬ್ಆಟೋಮಿಕ್ ಕಣಗಳು, ಸಮುದ್ರದ ಅಲೆಗಳು, ಕಾಂಗರೂಗಳು ಸ್ವಲ್ಪ ಮಟ್ಟಿಗೆ ಪ್ರಾಕೃತಿಕ ನಿಯಮವನ್ನು ಪಾಲಿಸಿದಾಗ್ಯೂ ಅವುಗಳಿಗೆ ನೈತಿಕ ಆಜ್ಞೆ ಬೇಕಾಗಿಲ್ಲ ಅಥವಾ ಅನುಸರಿಸುವುದಿಲ್ಲ. ಕೇವಲ ನೈತಿಕ ಜೀವಿಗಳು ಮಾತ್ರ ಮಾಡುತ್ತಾರೆ, ಆದುದರಿಂದ ದೇವರು ಪರಲೋಕದಲ್ಲಿಯೂ ನೈತಿಕ ನಿಯಮವನ್ನು ತನ್ನ ದೂತರಿಗೂ ಕೊಟ್ಟಿದ್ದಾನೆ.

ಯೆಹೆಜ್ಕೇಲನು 28:15,16 ನ್ನು ಓದಿ. ಪರಲೋಕದಿಂದ ಬಿದ್ದ ಲೂಸಿಫರ್‌ನ ಬಗ್ಗೆ ಮಾತನಾಡುತ್ತದೆ. "ಅಪರಾಧವು" ಅವನಲ್ಲಿ ಕಂಡು ಬಂದದ್ದರಿಂದ ಹಾಗೂ ಅವನು "ಪಾಪ" ಮಾಡಿದ. ಈ ಪದಗಳು ಇಲ್ಲಿ ಉಪಯೋಗವಾಗಿರುವ ಸನ್ನಿವೇಶದಲ್ಲಿ

ಪರಲೋಕದಲ್ಲಿ ನೈತಿಕ ನಿಯಮಗಳ ಅಸ್ತಿತ್ವದಲ್ಲಿತ್ತೆಂದು ಪ್ರಕಟಿಸುತ್ತದೆಯೇ?

ಅಪರಾಧ ಮತ್ತು ಪಾಪ ಎರಡು ಪದಗಳು ಇಲ್ಲಿ ಮಾನವರ ಮಧ್ಯದಲ್ಲಿ ಉಪಯೋಗಿಸುವುದನ್ನು ಕಾಣುತ್ತೇವೆ. ಆದರೆ ಶಾಸ್ತ್ರಗಳು ಅದೇ ಪದಗಳನ್ನು ಉಪಯೋಗಿಸಿ ಪರಲೋಕದಲ್ಲಿ ಏನಾಯಿತೆಂದು ತಿಳಿಸುತ್ತದೆ. ಅದು ಸೃಷ್ಟಿಯ ಮತ್ತೊಂದು ಭಾಗದಲ್ಲಿ ಇದು ಏನು ಹೇಳುತ್ತದೆಂದರೆ ಪರಲೋಕದಲ್ಲಿ ಅಸ್ತಿತ್ವದಲ್ಲಿರುವುದು ಭೂಲೋಕದಲ್ಲಿಯೂ ಇದೆ. "ಹಾಗಾದರೆ ನಾವು ಏನು ಹೇಳೋಣ? ಧರ್ಮಶಾಸ್ತ್ರವು ಪಾಪ ಸ್ವರೂಪವೋ? ಎಂದಿಗೂ ಇಲ್ಲ! ಧರ್ಮಶಾಸ್ತ್ರದಿಂದಲೇ ಹೊರತು ಪಾಪವೆಂಬುದು ಏನೋ ನನಗೆ ಗೊತ್ತಾಗುತ್ತಿರಲಿಲ್ಲ. ಆಶಿಸಬಾರದೆಂದು ಧರ್ಮಶಾಸ್ತ್ರವು ಹೇಳದಿದ್ದರೆ ದುರಾಶೆಯ ಎಂದರೆ ಏನೋ ನನಗೆ ತಿಳಿಯುತ್ತಿದ್ದಿಲ್ಲ" (ರೋಮಾಪುರದವರಿಗೆ 7:7).

ನೈತಿಕ ಜೀವಿಗಳು, ದೇವದೂತರು ಇರುವ ಪರಲೋಕದಲ್ಲಿ ಅದೇ ಕಲ್ಪನೆ ಕನಿಷ್ಠ ನಿಯಮದಲ್ಲಿ ಹೇಗೆ ಅಸ್ತಿತ್ವದಲ್ಲಿರಬಹುದು?

ಎಲೆನ್ ಜಿ ವೈಟ್ ವಿವರಿಸುವಾಗೆ "ದೇವರ ಚಿತ್ತವನ್ನು ಆತನ ಪವಿತ್ರ ಕಾನೂನಿನ ನಿಯಮಗಳಲ್ಲಿ ವ್ಯಕ್ತಪಡಿಸಲಾಗುತ್ತದೆ ಮತ್ತು ಈ ಕಾನೂನಿನ ತತ್ವಗಳು ಸ್ವರ್ಗದ ತತ್ವಗಳಾಗಿವೆ. ಪರಲೋಕದ ದೇವದೂತರು ದೇವರ ಚಿತ್ತವನ್ನು ತಿಳಿಯುವುದೇ. ಅವರು ಸಾಧಿಸುವ ಉಚ್ಚ ಜ್ಞಾನವಾಗಿದೆ ಮತ್ತು ಆತನ ಚಿತ್ತವನ್ನು ಮಾಡುವುದೇ ಅವರ ಅತ್ಯಧಿಕ ಸೇವೆ ಆಗಿದೆ" (ಥಾಟ್ಸ್ ಫ್ರಮ್ ದ ಮೌಂಟ್ ಆಫ್ ಬ್ಲೆಸಿಂಗ್ಸ್ ಪುಟ 109).

ನೈತಿಕ ಕಾನೂನಿನ ಕಲ್ಪನೆಯು ನೈತಿಕ ಜೀವಿಗಳಿಂದ ಅಸ್ತಿತ್ವದ ಕಲ್ಪನೆಯಿಂದ ಏಕೆ ಬೇರ್ಪಡಿಸಲಾಗದು? ನೈತಿಕ ಕಾನೂನಿಲ್ಲದೆ ಯಾವುದು ನೈತಿಕ ಯಾವುದು ನೈತಿಕ ಅಲ್ಲ ಎಂದು ಯಾವುದು ವ್ಯಾಖ್ಯಾನಿಸುತ್ತದೆ?

**ಸೋಮವಾರ** **ನವೆಂಬರ್ 8**

## ಧರ್ಮೋಪದೇಶಕಾಂಡದಲ್ಲಿ ಕಾನೂನು

ದೇವರು ಆಯ್ಕೆ ಮಾಡಿದ ಜನರು ಅಂತಿಮವಾಗಿ, ದೇವರೇ ವಾಗ್ದಾನ ಮಾಡಿದ ಭೂಮಿಯನ್ನು ಆನುವಂಶಿಕವಾಗಿ ಹೊಂದಲು ಇಬ್ರಿಯ ಜನಾಂಗದವರು ಕಾನಾನ

ದೇಶದ ಗಡಿಯಲ್ಲಿ ಇದ್ದರು. ನಾವು ಇಬ್ರಿಯ ಆ ಭೂಮಿಯನ್ನು ಪಡೆಯುವ ಮುನ್ನ ಇಬ್ರಿಯರಿಗೆ ಮೋಶೆಯ ತನ್ನ ಅಂತಿಮ ಸೂಚನೆಗಳನ್ನು ಕೊಡುವುದನ್ನು ಧರ್ಮೋಪದೇಶಕಾಂಡದಲ್ಲಿ ಕಾಣುತ್ತೇವೆ. ಆ ಸೂಚನೆಗಳಲ್ಲಿ ಅವರು ಆಜ್ಞೆಗಳಿಗೆ ವಿಧೇಯರಾಗತಕ್ಕದ್ದು.

ಈ ಕೆಳಕಂಡ ವಚನಗಳನ್ನು ಓದಿ. ಯಾವ ಅಂಶವನ್ನು ಪದೇ ಪದೇ ವ್ಯಕ್ತಪಡಿಸಲಾಗಿದೆ? ಯಾಕೆ ಈ ಅಂಶವು ಜನರಿಗೆ ಬಹಳ ಮುಖ್ಯ?

(ಧರ್ಮೋಪದೇಶಕಾಂಡ 4:44, ಧರ್ಮೋಪದೇಶಕಾಂಡ 17:19, ಧರ್ಮೋಪದೇಶಕಾಂಡ 28:58, ಧರ್ಮೋಪದೇಶಕಾಂಡ 30:10, ಧರ್ಮೋಪದೇಶ ಕಾಂಡ 31:12, ಧರ್ಮೋಪದೇಶಕಾಂಡ 32:46, ಧರ್ಮೋಪದೇಶಕಾಂಡ 33:2).

ಧರ್ಮೋಪದೇಶಕಾಂಡ ಪುಸ್ತಕವನ್ನು ಅತಿ ಅವಸರದಲ್ಲಿ ಓದಿದರೂ ಇಸ್ರಾಯೇಲ್ ಜನಾಂಗದವರಿಗೆ ಕಾನೂನಿಗೆ ವಿಧೇಯರಾಗುವುದು ಎಷ್ಟು ನಿರ್ಣಾಯಕವಾದದ್ದೆಂದು ತಿಳಿಸುತ್ತದೆ. ನೈಜ ಅರ್ಥದಲ್ಲಿ ಅವರು ಒಡಂಬಡಿಕೆ ಬದ್ಧರಾಗತಕ್ಕದ್ದು. ಅವರು ತಾವೇ ಮಾಡಿಕೊಳ್ಳಲಾಗದಂತ ಕೆಲಸವನ್ನು ದೇವರು ಅವರಿಗೆ ಬಹಳ ಮಾಡಿದ್ದಾರೆ. ಇನ್ನೂ ಹೆಚ್ಚು ಮಾಡಲು ದೇವರು ಮುಂದುವರಿಸುವನು. ಅವರು ಅದಕ್ಕೆ ಅರ್ಹರು ಆಗಿರಲಿಲ್ಲದಿದ್ದಾಗ್ಯೂ (ಅದು ತಾನೆ ಕೃಪೆ. ನಾವು ಅರ್ಹರಾಗದಿದ್ದರೂ ದೇವರು ನಮಗೆ ಕೊಡುತ್ತಿದ್ದಾನೆ). ಪ್ರತಿಕ್ರಿಯೆಯಾಗಿ ದೇವರು ನಮ್ಮನ್ನು ಕೇಳುವುದು ಆತನ ಆಜ್ಞೆಗೆ ನಾವು ವಿಧೇಯರಾಗತಕ್ಕದ್ದು. ಈಗ ವ್ಯತ್ಯಾಸ/ ವಿಭಿನ್ನ ಏನು ಇಲ್ಲ. ದೇವರ ಕೃಪೆಯು ಕಾನೂನಿನ ಕಾರ್ಯಗಳನ್ನು ಹೊರತುಪಡಿಸಿ ನಮ್ಮನ್ನು ರಕ್ಷಿಸುತ್ತದೆ– "ಧರ್ಮಪ್ರಮಾಣ ಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬುದಾಗಿ ನಿಶ್ಚಯ ಮಾಡಿಕೊಂಡಿದ್ದೇವಲ್ಲಾ" (ರೋಮಾಪುರದವರಿಗೆ 3:28). ತಮ್ಮ ಪ್ರತಿಕ್ರಿಯೆಯು ಆಜ್ಞೆಗಳಿಗೆ ವಿಧೇಯರಾಗತಕ್ಕದ್ದು.

ನಾವು ಆಜ್ಞೆಗೆ ವಿಧೇಯರಾಗಿ ಆದರೂ ಅದರಿಂದ ರಕ್ಷಿಸಲು ವ್ಯರ್ಥ ಪ್ರಯತ್ನದಿಂದಲ್ಲ. "ಯಾಕೆಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ (ರೋಮಾಪುರದವರಿಗೆ 3:20). ಆದರೆ ರಕ್ಷಣೆಯ

ಪರಿಣಾಮವಾಗಿ, ನಮಗೆ ತುಂಬಾ ಕೃಪೆ ನೀಡಲಾಗಿದೆ. "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ" (ಯೋಹಾನ 14:15).

ಧರ್ಮೋಪದೇಶಕಾಂಡದಲ್ಲಿ ಕೃಪೆ ಮತ್ತು ಕಾನೂನನ್ನು ಒಂದು ದೊಡ್ಡ ವಸ್ತು ಪಾಠವಾಗಿ ಕಾಣಬಹುದು. ನಾವು ನಮಗೆ ಏನನ್ನು ಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲವೋ ಅದನ್ನೇ ದೇವರು ತನ್ನ ಕೃಪೆಯಿಂದ ವಿಮೋಚಿಸಿದನು. (ಇಸ್ರಾಯೇಲ್ಯರು ತಮ್ಮ ಸ್ವಂತ ಶಕ್ತಿಯಿಂದ ಐಗುಪ್ತದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿದ್ದಿಲ್ಲ). ನಂಬಿಕೆಯಿಂದಲೇ ಜೀವಿಸುವುದರಿಂದ ನಾವು ಪ್ರತಿಕ್ರಿಯಿಸಿ ಆತನಿಗೂ ಮತ್ತು ಆತನ ಆಜ್ಞೆಗೂ ವಿಧೇಯರಾಗಿ ಜೀವಿಸುತ್ತೇವೆ.

ಆದಾಮನ ಪಾಪದಿಂದ ಹಿಡಿದು ಇಕ್ಕಟ್ಟಿನ ಕಾಲದವರೆಗೆ ಜೀವಿಸುವ ಅವರಿಗೆ ಮತ್ತು ಮೃಗದ ಗುರುತು ಮತ್ತು ದೇವರ ಆಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಕೊಂಡು ನಡೆಯುವವರನ್ನು ಚಿತ್ರಿಸುತ್ತದೆ (ಪ್ರಕಟನೆ 14:12). ದೇವರ ಒಡಂಬಡಿಕೆಯ ಜನರೊಂದಿಗಿನ ಸಂಬಂಧವು ಒಂದು ಕಾನೂನು ಮತ್ತು ಕೃಪೆಯಿಂದ ಕೂಡಿದೆ.

ಆತನ ಆಜ್ಞೆಗೆ ಅವಿಧೇಯರಾದರೆ ದೇವರ ಕೃಪೆ ಅವರನ್ನು ಕ್ಷಮಿಸುತ್ತದೆ ಹಾಗೂ ದೇವರ ಕೃಪೆಯು ಆತನ ಆಜ್ಞೆಗಳಿಗೆ ವಿಧೇಯರಾಗಲು ಸಕ್ರಿಯಗೊಳಿಸುತ್ತದೆ. ಈ ವಿಧೇಯತೆಯು ನಮ್ಮ ಒಡಂಬಡಿಕೆ ಸಂಬಂಧದಿಂದ ಉದ್ಭವಿಸುತ್ತದೆ. ನಾವು ಕಾನೂನನ್ನು ಪಾಲಿಸುವಾಗ ಕಾನೂನುಬದ್ಧವಾಗದಿರುವ ಬಲೆಯಿಂದ ನಾವು ಹೇಗೆ ತಪ್ಪಿಸಬಹುದು?

**ಮಂಗಳವಾರ** **ನವೆಂಬರ್ 9**

## ನಿಮ್ಮ ಮೇಲಿಗಾಗಿ

ದೇವರ ವಾಕ್ಯವನ್ನು ತಿರಸ್ಕರಿಸಲು ಕಾರಣಗಳನ್ನು ನೋಡಲಾಗುತ್ತಿದ್ದ ಸಂದೇಹವಾದಿಗಳು. ಆಗಾಗ್ಗೆ ಹಳೆಯ ಒಡಂಬಡಿಕೆಯಲ್ಲಿ ಕಂಡುಬರುವ ಕೆಲವು ಬಲವಾದ ಪದಗಳಿಗೆ ಸೂಚಿಸುತ್ತಾರೆ. ಅದರ ಉದ್ದೇಶ, ಹಳೆಯ ಒಡಂಬಡಿಕೆಯ ದೇವರು ಬಹಳ ಕಠಿಣ, ಪ್ರತೀಕಾರ ಮತ್ತು ಕ್ಷುಲ್ಲಕ ಮನೋಭಾವವು ವಿಶೇಷವಾಗಿ

ಯೇಸುವಿಗೆ ಭಿನ್ನವಾಗಿದೆ ಎಂದು ತೋರಿಸಲು. ಇದು ಹೊಸ ವಾದವೇನು ಅಲ್ಲ. ಆದರೆ ಇದು ಈಗ ದೋಷಪೂರಿತವಾಗಿದೆಯೋ ಅದೇ ರೀತಿ ಪ್ರಥಮವಾಗಿ ಶತಮಾನಗಳ ಹಿಂದೆಯೇ ಬೆಂಬಲಿಸಿದೆ. ಹಳೆ ಒಡಂಬಡಿಕೆಯಲ್ಲಿ ಮತ್ತೆ ಮತ್ತೆ ಪ್ರಸ್ತುತ ಪಡಿಸುವುದೇನೆಂದರೆ ಕರ್ತನು ತನ್ನ ಪುರಾತನ ಜನರಾದ ಇಸ್ರಾಯೇಲ್ಯರನ್ನು ಪ್ರೀತಿಸಿದ ಮತ್ತು ಅವರಿಗೆ ಶ್ರೇಷ್ಠವಾದದ್ದನ್ನು ಬಯಸಿದನು. ಈ ಪ್ರೀತಿಯು ಶಕ್ತಿಮಯವಾಗಿ ಧರ್ಮೋಪದೇಶಕಾಂಡ ಪುಸ್ತಕದಲ್ಲಿ 10:1–15 ಓದಿ. ಈ ವಚನಗಳ ತಕ್ಷಣ ಸನ್ನಿವೇಶ ಏನಾಗಿದೆ? ಮತ್ತು ಅವರು ಪಾಪ ಮಾಡಿದಾಗ್ಯೂ ದೇವರು ತನ್ನ ಜನರನ್ನು ಕುರಿತು ಭಾವಿಸಿದ್ದೇನು? ಇದು ಆತನ ಕೃಪೆಯನ್ನು ಕುರಿತು ಕಲಿಸುವುದೇನು?

ಈ ವಚನಗಳಲ್ಲಿ ಇಸ್ರಾಯೇಲ್ಯರಿಗೆ ದೇವರ ಕೃಪೆ ಮತ್ತು ಪ್ರೀತಿ ಹೊರಸೂಸುತ್ತದೆ. ವಿಶೇಷವಾಗಿ 12 ಮತ್ತು 13 ವಚನಗಳಲ್ಲಿ ಗಮನಿಸಿ. ಅದು ಒಂದೇ ವಾಕ್ಯವಾಗಿದೆ ಅದು ಪ್ರಶ್ನೆಯಾಗಿದೆ. ಆ ಪ್ರಶ್ನೆ ಸರಳವಾಗಿದೆ. ಕರ್ತನು ನಾನು ಏನು, ಈ ಕೆಳಕಂಡದ್ದನ್ನು ಮಾಡಲು ನಿಮ್ಮನ್ನು ಕೇಳುತ್ತೇನೆ.... ನನ್ನ ಮಾರ್ಗದಲ್ಲಿ ನಡೆಯಿರಿ, ನನ್ನನ್ನು ಪ್ರೀತಿಸಿರಿ, ನನ್ನನ್ನು ಸೇವಿಸಿರಿ, ನಿಮ್ಮ ಒಳಿತಿಗಾಗಿ ನನ್ನ ನಿಯಮಗಳನ್ನು ಇಟ್ಟುಕೊಳ್ಳುವುದು?

ಇಬ್ರಿಯ ಎಲ್ಲಾ ವಚನಗಳ ಮೂಲಕ ನಿಮ್ಮ ಮತ್ತು ನಿನ್ನ ಎಂಬುವ ಪದಗಳು ಏಕವಚನದಲ್ಲಿದೆ. ದೇವರು ಖಂಡಿತವಾಗಿಯೂ ಇಡೀ ಜನಾಂಗಕ್ಕೆ ಮಾತನಾಡಿದಾಗ್ಯೂ, ಆತನ ಪದಗಳು ತನ್ನ ಮಕ್ಕಳ ವೈಯಕ್ತಿಕವಾಗಿ ಅವರು ವಿಧೇಯುರಾಗಿದಿದ್ದರೆ ಏನೆಲ್ಲಾ ಒಳ್ಳೆದು ಅವರಿಗಾಗುವುದು. ಎಲ್ಲವೂ ಉತ್ತಮವಾಗಿರುತ್ತಿತ್ತು. ಕರ್ತನು ಒಬ್ಬರಿಗೊಬ್ಬರಾಗಿ ಏಕಾಂಗಿಯಾಗಿ ಮಾತನಾಡುವ ಹಾಗೆ ಇಸ್ರಾಯೇಲ ಜನಾಂಗದವರೊಂದಿಗೆ ಮಾತಾಡುತ್ತಾನೆ.

ನಾವು 13ನೇ ವಚನದ ಕೊನೆ ಭಾಗವನ್ನು ಮರೆಯಲಾಗದು. ನಿಮ್ಮ ಮೇಲಿಗಾಗಿ "ಇದನ್ನು ಇಟ್ಟುಕೊಳ್ಳಿ. ಬೇರೆ ವಾಕ್ಯದಲ್ಲಿ ದೇವರು ಅವರಿಗೆ ವಿಧೇಯರಾಗಲು ಆಜ್ಞಾಪಿಸುತ್ತಾನೆ. ಅವರ ಉತ್ತಮ ಆಸಕ್ತಿಗಾಗಿ ಮಾತ್ರ.

ದೇವರು ಅವರನ್ನು ಉಂಟುಮಾದಿದ ದೇವರು ಅವರನ್ನು ಆಧರಿಸುತ್ತಾನೆ. ಅವರಿಗೆ ಯಾವುದು ಶ್ರೇಷ್ಠವೆಂದು ಆತನಿಗೆ ಗೊತ್ತು. ಅವರಿಗೆ ಅತ್ಯುತ್ತಮವಾದದ್ದನ್ನೇ

ಅವರಿಗೆ ಬಯಸುತ್ತಾನೆ. ಅವರು ಆತನ ಹತ್ತು ಆಜ್ಞೆಗಳಿಗೆ ವಿಧೇಯರಾದರೆ ಅದು ಅವರ ಲಾಭಕ್ಕಾಗಿಯೇ.

ಸಹಜವಾಗಿ, ಆಜ್ಞೆಯು ಅವರಿಗೆ ಬೇಲಿಗೆ ಹೋಲಿಕೆ ಆಗಿದೆ. ಸಂರಕ್ಷಣೆಯ ಗೋಡೆ. ಆ ಗೋಡೆಯೊಳಗೆ ಇದ್ದರೆ ಆತನ ಅನುಯಾಯಿಗಳು ದುಷ್ಟನ ತಪ್ಪದಿಂದ ಸಂರಕ್ಷಣೆ ಸಿಗುತ್ತದೆ. ಅದರೊಳಗೆ ಇಲ್ಲದಿದ್ದರೆ ಅವರನ್ನು ನಾಶ ಮಾಡುವನು. ಸಂಕ್ಷಿಪ್ತವಾಗಿ ಹೇಳುವುದಾದರೆ, ದೇವರು ತನ್ನ ಜನರ ಮೇಲೆ ಪ್ರೀತಿಯಿಂದ ದೇವರು ತನ್ನ ಆಜ್ಞೆಯನ್ನು ಕೊಟ್ಟನು. ಅವುಗಳಿಗೆ ವಿಧೇಯರಾದರೆ ಅದು ಅವರ ಒಳ್ಳೆಯದಕ್ಕಾಗಿಯೇ.

ದೇವರ ಆಜ್ಞೆಗಳಿಗೆ ವಿಧೇಯರಾದ ಪ್ರಯುಕ್ತವಾಗಿ ಯಾವ ವಿಧದಲ್ಲಿ ನಿಮಗೆ ಒಳ್ಳೆದಾಗಿರುವುದನ್ನು ನೀವು ಕಂಡಿದ್ದೀರಾ?

**ಬುಧವಾರ** **ನವೆಂಬರ್ 10**

## ಐಗುಪ್ತದಲ್ಲಿ ಗುಲಾಮ

ಧರ್ಮೋಪದೇಶಕಾಂಡ ಪುಸ್ತಕದಲ್ಲಿ ದೇವರು ತನ್ನ ಜನರಾದ ಇಸ್ರಾಯೇಲ್ಯರನ್ನು ಐಗುಪ್ತದಿಂದ ಬಿಡುಗಡೆ ಮಾಡಿದ ಒಂದೇ ವಿಷಯ ಕಾಣಿಸುವುದಲ್ಲದೆ ಮರು ಕಾಣಿಸುತ್ತದೆ.

"ಭೂತಕಾಲವನ್ನೂ, ಶಿಕ್ಷಾಹಸ್ತವನ್ನೂ, ಮಹಾಭೀತಿಯುನ್ನೂ ಮಹತ್ಕಾರ್ಯಗಳನ್ನೂ, ಉತ್ಪಾತಗಳನ್ನೂ ಪ್ರಯೋಗಿಸಿ ನಮ್ಮನ್ನು ಬಿಡಿಸಿ ಐಗುಪ್ತ ದೇಶದಿಂದ ಕರ ತಂದನು" (ಧರ್ಮೋಪದೇಶಕಾಂಡ 26:8). ಹಾಗೂ ಧರ್ಮೋಪದೇಶಕಾಂಡ 16:1–6ರನ್ನು ನೋಡಿ.

ಎಲ್ಲಾ ಹಳೆ ಒಡಂಬಡಿಕೆಯ ಮೂಲಕ ವಿಮೋಚನೆಯ ಕಥೆಯು, ದೇವರು ಪ್ರಬಲವಾದ ರೀತಿ ವಿಮೋಚಿಸಿದಕ್ಕಾಗಿ ಒಂದು ಮಾದರಿಯಾಗಿದೆ. ಉಲ್ಲೇಖಿಸಲಾಗಿದೆ. ಆತನ ಕೃಪೆಯಿಂದ ಅವರನ್ನು ಗುಲಾಮತ್ವದಿಂದಲೂ ಮತ್ತು ಐಗುಪ್ತರ ದಬ್ಬಾಳಿಕೆಯಿಂದಲೂ : "ನಾನು ನಿಮ್ಮನ್ನು ಐಗುಪ್ತ ದೇಶದೊಳಗಿಂದ ಪಾರು ಮಾಡಿ, ದಾಸತ್ವದಿಂದ ಬಿಡಿಸಿದೆನು" (ಮೀಕ 6:4).

ಹೊಸ ಒಡಂಬಡಿಕೆಯಲ್ಲೆಲ್ಲ ಈ ಆಲೋಚನೆಯು ಕಾಣುತ್ತದೆ. ದೇವರ

ಮಹಾಶಕ್ತಿಯಿಂದ ಐಗುಪ್ತದಿಂದ ಬಿಡುಗಡೆಯು ಕ್ರಿಸ್ತನ ಮೇಲೆ ನಂಬಿಕೆಯಿಂದ ರಕ್ಷಣೆಗೆ ಒಂದು ಚಿಹ್ನೆಯಾಗಿದೆ "ನಂಬಿಕೆಯಿಂದಲೇ ಇಸ್ರಾಯೇಲ್ಯರು ಕೆಂಪು ಸಮುದ್ರವನ್ನು ಒಣಭೂಮಿಯನ್ನು ದಾಟುವಂತೆ ದಾಟಿದರು. ಐಗುಪ್ತ ದೇಶದವರು ಅದನ್ನು ದಾಟುವುದಕ್ಕೆ ಪ್ರಯತ್ನಿಸಿ ಮುಳುಗಿಹೋದರು" (ಇಬ್ರಿಯರಿಗೆ 11:29, 1 ಕೊರಿಂಥ 10:1–4).

ಧರ್ಮೋಪದೇಶಕಾಂಡ 5:6–22 ಅನ್ನು ಓದಿ. ಯೆಹೋವನ ಸಂಗಡ ಮಾಡಿಕೊಂಡ ಒಡಂಬಡಿಕೆಗೆ ಮೋಶೆಯು ಹತ್ತು ಆಜ್ಞೆಗಳ ಅಡಿಪಾಯ ಷರತ್ತೆಂದು ಪ್ರವರ್ತಿಸುತ್ತಾನೆ. ನಾಲ್ಕು ಆಜ್ಞೆಯನ್ನು ಕೊಟ್ಟ ಕಾರಣವನ್ನು ನಾವು ಇಲ್ಲಿ ಗಮನಿಸಬೇಕಾಗಿದೆ. ಅಲ್ಲಿ ಎನು ಹೇಳಿದಿಯೋ ಅದು ಆಜ್ಞೆ ಮತ್ತು ಕೃಪೆಯ ವಾಸ್ತವವನ್ನು ಪ್ರಕಟಿಸುತ್ತದೆಯೇ?

ಏಳನೇ ದಿನದ ಸಬ್ಬತ್ ದಿನದಲ್ಲಿ ವಿಶ್ರಮಿಸಿಕೊಳ್ಳತಕ್ಕದ್ದೆಂದು ಮೋಶೆಯು ಆಜ್ಞೆಯ ಮೂಲವೆಂದು ಪುನರಾವರ್ತಿಸುತ್ತಾನೆ. ಆದರೆ ಅದಕ್ಕೆ ಇನ್ನೂ ಹೆಚ್ಚು ಮಹತ್ವವನ್ನು ಕೂಡಿಸುತ್ತಾನೆ. ವಿಮೋಚನೆಯಲ್ಲಿ ಅದು ಕಲ್ಲಿನ ಮೇಲೆ ಬರೆದಾಗ್ಯೂ ಇಲ್ಲಿ ಮೋಶೆಯು ಈಗಾಗಲೇ ಕೊಟ್ಟಿರುವುದನ್ನು ವಿಸ್ತರಿಸುತ್ತಾನೆ. ಸೃಷ್ಟಿಯ ಸ್ಮಾರಕವಾಗಿ ಸಬ್ಬತ್‌ನ್ನು ಇಟ್ಟುಕೊಳ್ಳುವುದು ಮಾತ್ರವಲ್ಲದೇ ಅದು ಐಗುಪ್ತದಿಂದ (ವಿಮೋಚನೆಯು) ಸ್ಮಾರಕ. ದೇವರ ಕೃಪೆಯು ಅವರನ್ನು ಐಗುಪ್ತದಿಂದ ರಕ್ಷಿಸಿ ಅವರಿಗೆ ಕೆಲಸದಿಂದ ವಿಶ್ರಾಂತಿ ಸಿಕ್ಕಿತು. (ಇಬ್ರಿಯರಿಗೆ 4:1–5). ದೇವರು ಕೊಟ್ಟ ಕೃಪೆಯ ಪ್ರತಿಕ್ರಿಯೆಯಾಗಿ ಅವರು ಅದನ್ನು ಇತರರಿಗೆ ವಿಸ್ತರಿಸಬೇಕಾಗಿದೆ.

ಈ ವಿಷಯದಲ್ಲಿ ಏಳನೇ ದಿನದ ಸಬ್ಬತ್ತು ಕೇವಲ ಸೃಷ್ಟಿಯ ಸ್ಮಾರಕ ಮಾತ್ರ ಆಗುವುದಲ್ಲದೆ ಅದು ಕೃಪೆಗೂ ಮತ್ತು ವಿಮೋಚನೆಗೂ ಬಹಳ ಶಕ್ತಿಮಯವಾದ ಚಿಹ್ನೆ ಆಗಿದೆ. ಮನೆಯವರು ಅಂದರೆ ಮಕ್ಕಳು ಮಾತ್ರವಲ್ಲ, ಆದರೆ ಸೇವಕರು, ಪ್ರಾಣಿಗಳು ಮತ್ತು ಅವರ ಜೊತೆ ಇರುವ ಅಪರಿಚಿತರು ಸಹ ವಿಶ್ರಮಿಸಿಕೊಳ್ಳತಕ್ಕದ್ದು.

ಯೆಹೂದಿಯರಿಗೆ ಕೊಡಲ್ಪಟ್ಟ ಕೃಪೆಯು ಇತರರಿಗೂ ವಿಸ್ತರಿಸಲಾಗಿದೆ ಹಾಗೂ ಒಡಂಬಡಿಕೆ ಒಳಗಾಗದಿದ್ದ ಜನರಿಗೂ ಸಹ ಕೊಡಲ್ಪಟ್ಟಿದೆ ಮತ್ತು ಅದು ಕಾನೂನಿನ ದೇವರ ಹೃದಯದಲ್ಲಿದೆ. ದೇವರ ಕೃಪೆಯಿಂದ ಅವರಿಗೆ ಏನು ಮಾಡಿದನೋ ಅದನ್ನು ಅವರು ಇತರರಿಗೆ ಮಾಡತಕ್ಕದ್ದು. ಅದು ಅಷ್ಟು ಸರಳ.

ಮತ್ತಾಯ 18:21–35 ಅನ್ನು ಓದಿ. ಈ ಸಾಮ್ಯದಲ್ಲಿನ ತತ್ವವು ಸಬ್ಬತ್ ಆಜ್ಞೆಯ ಯಾವ ರೀತಿಯಲ್ಲಿ ಬಹಿರಂಗವಾಗಿದೆ. ವಿಶೇಷವಾಗಿ ಧರ್ಮೋಪದೇಶಕಾಂಡದಲ್ಲಿ ಒತ್ತಿ ಹೇಳಿದ ಹಾಗಿದೆ?

**ಗುರುವಾರ** **ನವೆಂಬರ್ 11**

## ನಿಮ್ಮ ನೀತಿಯ ನಿಮಿತವಲ್ಲ

ಕ್ರೈಸ್ತೀಯ ಧರ್ಮಕ್ಕೆ ಕೇಂದ್ರ ಹಾಗೂ ಎಲ್ಲಾ ಸತ್ಯವೇದದ ಕ್ರೈಸ್ತರಲ್ಲಿ ನಂಬಿಕೆಯಿಂದಲೇ ನೀತಿ ನಿರ್ಣಯ ಎಂಬುದು ಶ್ರೇಷ್ಠ ವಿಷಯ. "ಇದರ ವಿಷಯದಲ್ಲಿ ಶಾಸ್ತ್ರವು ಹೇಳುವುದನ್ನು ಆಲೋಚಿಸಿರಿ. ಅಬ್ರಾಹಾಮನು ದೇವರನ್ನು ನಂಬಿದನು. ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಕೆಯಾಗುವುದು". ರೋಮಾಪುರದವರಿಗೆ 4:3 ಎಲ್ಲೆನ್ ಜಿ ವೈಟ್ ಪ್ರಸಿದ್ಧವಾಗಿ ಹೀಗೆ ವ್ಯಕ್ತಪಡಿಸಿದ್ದಾರೆ. ನಂಬಿಕೆಯಿಂದ ನೀತಿನಿರ್ಣಯ ಎಂದರೇನು?

ಅದು ದೇವರ ಕೆಲಸ ಮನುಷ್ಯನ ಮಹಿಮೆಯನ್ನು ಮಣ್ಣಿನಲ್ಲಿ ಇಟ್ಟು ತನ್ನ ಶಕ್ತಿಯಿಂದ ಏನನ್ನು ಮಾಡಲಾಗದೆ ಹೋಯಿತೋ ಅದನ್ನು ಮನುಷ್ಯನಿಗಾಗಿ ಮಾಡಿದನು. ಮನುಷ್ಯರು ಅವರ ಕೈಯಲ್ಲಿ ಏನೂ ಇಲ್ಲ ಎಂದು ಕಾಣುವಾಗ ಅವರು ಕ್ರಿಸ್ತನ ನೀತಿಯಿಂದ ಧರಿಸಲು ಸಿದ್ಧರಾಗಿದ್ದಾರೆ" ಎಲ್ಲೆನ್ ಜಿ ವೈಟ್ ದಿ ಫೆತ್ ಐ ಲೀವ್ ಬೈ, ಪುಟ 109.

ಪ್ರಶ್ನೆಗೆ ಮೀರಿ, ದೇವರು ಯಾರು ಎಂದು ನೀನು ಪರಿಗಣಿಸಿದಾಗ ಅವನು ಎಷ್ಟು ಪರಿಶುದ್ಧನೆಂದು ತಿಳಿದು ನಾವು ಇದಕ್ಕೆ ವಿರುದ್ಧವಾಗಿ ನಾವು ಯಾರು ನಾವು ಆತನಿಗೆ ವಿರುದ್ಧವಾಗಿ ಎಷ್ಟು ಅಪವಿತ್ರ ಎಂದು ಪರಿಗಣಿಸಿದರೆ– ನಮ್ಮನ್ನು ರಕ್ಷಿಸಲು ಅದು ಅದ್ಭುತವಾದ ಕೃಪೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಕ್ರಿಸ್ತನಲ್ಲಿ ಆ ಕೃಪೆಯ ಕ್ರಿಯೆಯೇ ಕೃಜೆಯ ಮೇಲೆ ಆಯಿತು. ಪಾಪರಹಿತನು ಅಪರಾಧ ಮಾಡಿದವರಿಗೆ ಸತ್ತನು.

ಈ ಹಿನ್ನೆಲೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಧರ್ಮೋಪದೇಶಕಾಂಡ 9:1–6ನ್ನು ಓದಿ. ಅಯೋಗ್ಯರಾದ ಜನರಿಗೆ ದೇವರ ವಾಸ್ತವಾದ ಕೃಪೆ ಹೇಗೆ ನಾಟಕೀಯವಾಗಿ ಪ್ರಕಟವಾಯಿತು ಎಂದು ಇಲ್ಲಿ ಮೋಶೆಯು ಜನರಿಗೆ ಹೇಳುವುದು ಏನು? ಇಲ್ಲಿ ಆದ ಕಾರ್ಯವು ಹೇಗೆ ನಂಬಿಕೆಯಿಂದಲೇ ನೀತಿ ನಿರ್ಣಯ

ಎಂಬ ತತ್ವವನ್ನು ಪ್ರಕಟಿಸುತ್ತದೆ?

ಸುವಾರ್ತೆಯ ಮೇಲೆ ಪೌಲನ ಬೋಧನೆಯನ್ನು ಒಬ್ಬರು ಸುತ್ತುವರಿಯಲು ಸಾಧ್ಯವಾದರೆ ಬಹುಶಃ ಅದು ಧರ್ಮೋಪದೇಶಕಾಂಡ 9:5ರಲ್ಲಿ ಕಂಡುಬರುವ ನುಡಿಗಟ್ಟು "ನಿಮ್ಮ ಪುಣ್ಯವೇ ಆಗಲಿ. ನಿಮ್ಮ ಸುಸ್ವಭಾವವೇ ಆಗಲಿ ಕಾರಣವಲ್ಲ". ದೇವರು ನಿಮ್ಮನ್ನು ಉಳಿಸಲಿದ್ದಾನೆಯೇ? ಬದಲಾಗಿ ಆತನು ಮಾಡುವುದು ಯಾಕೆಂದರೆ ನಿತ್ಯವಾದ ಶುಭ ವರ್ತಮಾನದ ವಾಗ್ದಾನದಿಂದ (ಪ್ರಕಟನೆ 14:6). ಒಂದು ವಾಗ್ದಾನ ನಮಗೆ ಕೊಡಲ್ಪಟ್ಟಿದೆ. "ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲೂ ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವುದಕ್ಕೆ ಅನಾದಿಕಾಲದಲ್ಲಿ ಅನುಗ್ರಹಿಸಿದನು" (2 ತಿಮೊಥೆಯನಿಗೆ 1:9, ತೀತನಿಗೆ 1:2 ಅನ್ನು ನೋಡಿ).

ಈ ವಾಗ್ದಾನವು ಅನಾದಿಕಾಲದಲ್ಲೇ ಕೊಟ್ಟಿದ್ದರೆ, ಖಂಡಿತವಾಗಿಯೂ ನಮ್ಮ ಕೆಲಸದಿಂದಲ್ಲ. ಯಾಕೆಂದರೆ ಆಗ ನಾವು "ಅನಾದಿಕಾಲದಲ್ಲಿ" ಅಸ್ತಿತ್ವದಲ್ಲಿ ಇದ್ದಿಲ್ಲ. ಆದುದರಿಂದ ಯಾವ ಕೆಲಸ ಇದ್ದಿಲ್ಲ. ಸಂತೋಷವಾಗಿ ನಿಮ್ಮ ತಪ್ಪು, ನಿಮ್ಮ ನ್ಯೂನತೆಗಳು ಹೊರತಾಗಿಯೂ ಈ ಅದ್ಭುತವಾದ ಕಾರ್ಯವನ್ನು ಕರ್ತನು ನಿಮಗಾಗಿಯೂ ಮತ್ತು ನಿಮ್ಮಲ್ಲಿಯೂ ಮಾಡುವನು. ಆದುದರಿಂದ ಇದರ ಪರಿಣಾಮವಾಗಿ ಕರ್ತನು ನಮಗೆ ಆಜ್ಞಾಪಿಸುವುದೇನೆಂದರೆ ಆತನಿಗೂ ಆತನ ಕಟ್ಟಳೆಗಳಿಗೆ ವಿಧೇಯರಾಗತಕ್ಕದ್ದು. ಈಗಾಗಲೇ ವಾಗ್ದಾನವು ನಮಗೆ ಕೊಡಲ್ಪಟ್ಟಿದೆ ಮತ್ತು ತಲುಪಿಸಲಾಗಿದೆ. ನಿಮ್ಮ ಕೆಲಸ, ನಿಮ್ಮ ವಿಧೇಯತೆ, ಅದು ಸಾಕಷ್ಟು ಉತ್ತಮವಾದಾಗ್ಯೂ (ಅವು ಉತ್ತಮವಿಲ್ಲ. ಅವು ರಕ್ಷಣೆಯ ರೀತಿಯಲ್ಲ. ಬದಲಾಗಿ ಅವು ಫಲಿತಾಂಶ ಮಾತ್ರ. ಕರ್ತನು ನಿಮ್ಮನ್ನು ತನ್ನ ಕೃಪೆಯಿಂದ ರಕ್ಷಿಸಿದ್ದಾನೆ. ಆತನ ಆಜ್ಞೆ ನಿಮ್ಮ ಹೃದಯದಲ್ಲಿ ಬರೆಯಲ್ಪಟ್ಟಿದೆ ಮತ್ತು ಆತನ ಆತ್ಮ ನಿಮ್ಮನ್ನು ಬಲಪಡಿಸುತ್ತದೆ, ನೀವು ಹೋಗಿ ಆತನ ಆಜ್ಞೆಗೆ ವಿಧೇಯರಾಗಿ.

**ಶುಕ್ರವಾರ** **ನವೆಂಬರ್ 12**

**ಹೆಚ್ಚಿನ ಆಲೋಚನೆ :** "ಪರಲೋಕದಲ್ಲಿ ದೇವರ ಆಜ್ಞೆಗೆ ವಿರುದ್ಧವಾಗಿ ಬಂಡಾಯ ಮಾಡಿದ ಕ್ರಿಸ್ತನ ವೈರಿಯಾದ ಸೈತಾನನು. ನುರಿತವನಂತೆ, ತರಬೇತಿ ಪಡೆದ ಜನರಲ್ ಆಗಿ, ತನ್ನ ಎಲ್ಲಾ ಶಕ್ತಿಯಿಂದ ಕೆಲಸ ಮಾಡಿ, ಒಂದು ಸಾದನ ನಂತರ

ಮತ್ತೊಂದನ್ನು ತರುತ್ತಾ ಎಲ್ಲಾ ವಂಚನೆಯಿಂದ, ದೇವರ ಆಜ್ಞೆಯನ್ನು ಪರಿಣಾಮ ಇಲ್ಲದಾಗ ಮಾಡಿದ್ದಾನೆ. ಆ ಆಜ್ಞೆಯು ನಿಜವಾಗಿಯೂ ಪಾಪದ ನಿಜವಾದ ಪತ್ತೆದಾರ ಮತ್ತು ಪರಿಶುದ್ಧತೆಯ ಪ್ರಮಾಣಿತ" (ಎಲೆನ್ ಜಿ ವೈಟ್, ರಿವೀವ್ ಅಂಡ್ ಎರಾಲ್ಡ್, ನವೆಂಬರ್ 18, 1890).

ಎರಡು ಟ್ರಿಲಿಯನ್ ಗ್ಯಾಲಕ್ಸಿಗಳು ಬ್ರಹ್ಮಾಂಡವನ್ನು ಸುಡುತ್ತದೆ. ಒಂದು ನೂರು ಬಿಲಿಯನ್ ನಕ್ಷತ್ರಗಳು ಪ್ರತಿಯೊಂದು ಗ್ಯಾಲಕ್ಸಿಯಲ್ಲಿದೆ. ಈಗ ಅದು ಅಸ್ತಿತ್ವದ ತತ್ವ ಯಾವುದನ್ನಾದರೂ ಕಲ್ಪಿಸಿ ಮತ್ತು ಸೃಷ್ಟಿಸಿದೆಯೋ ಅದು ಕಲ್ಪಿಸಿದಕ್ಕಿಂತ ಅಥವಾ ಸೃಷ್ಟಿಸಿದಕ್ಕಿಂತ  ದೊಡ್ಡದಾಗಿದೆ.

ಗುದಿಲಿಯೂ ಅದರ ಕಲಾಕೃತಿಗಿಂತ ದೊಡ್ಡದಾಗಿದೆ ಮತ್ತು ಮೀರಿದೆ. ದೇವರು ನಮ್ಮ ಬ್ರಹ್ಮಾಂಡವನ್ನು ಕಲ್ಪಿಸಿ ಮತ್ತು ಸೃಷ್ಟಿಸಿದವನು ಈ ಬ್ರಹ್ಮಾಂಡಕ್ಕಿಂತಲೂ ಶ್ರೇಷ್ಠವಾಗಿದ್ದಾನೆ. ಮತ್ತು ಆತನು ಅದನ್ನು ಮೀರುವವನಾಗಿದ್ದಾನೆ.

ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು, ಈ ಕೆಳಕಂಡ ವಚನವನ್ನು ಆಲೋಚಿಸಿರಿ. "ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬುವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವು ಉಂಟಾಯಿತು. ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ" (ಯೋಹಾನ 1:1–3).

ಅದು ಸೃಷ್ಟಿಸಿದ ಎಲ್ಲವನ್ನೂ ಸೃಷ್ಟಿಸಿದ ದೇವರು. 200,000,000,000,000,000, ತಾರೆಗಳನ್ನು ಮತ್ತು ಅವುಗಳೆಲ್ಲವನ್ನೂ ಸೃಷ್ಟಿಸಿದ. ಆತನು ಏನು ಮಾಡಿದನು? "ಆತನು ಕುಗ್ಗಿಸಿಕೊಂಡನು". "ಮಾನವ ಮಗುವಾದನು" ಪಾಪರಹಿತ ಜೀವಿತವನ್ನು ಜೀವಿಸಿದ ಅನಂತರ ನಮ್ಮೆಲ್ಲರ ಪಾಪದ ದಂಡವನ್ನು ಹೊತ್ತುಕೊಂಡು ಶಿಲುಬೆ ಮೇಲೆ ಸತ್ತನು. ಆದ್ದರಿಂದ ನಮಗೆ ನಿತ್ಯಜೀವದ ವಾಗ್ದಾನ ಸಿಕ್ಕಿತು. ನಮ್ಮ ಮುಂದೆ ಈ ದೊಡ್ಡ ಸತ್ಯ ಇದೆ. ಯೇಸುಕ್ರಿಸ್ತನು ಶಿಲುಬೆ ಮೇಲೆ ನಮಗೆ ತನ್ನ ಕೃಪೆಯನ್ನು ಕೊಟ್ಟನು. ಬದಲಾಗಿ ದೇವರು ನಮ್ಮಿಂದ ಏನನ್ನು ಕೇಳುತ್ತಾನೆ? "ವಿಷಯ ತೀರಿತು, ಎಲ್ಲವೂ ಕೇಳಿ ಮುಗಿಯಿತು; ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು, ಮನುಷ್ಯರೆಲ್ಲರ ಕರ್ತವ್ಯವು ಇದೆ" (ಪ್ರಸಂಗಿ 12:13).